**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 1575/2019**

**ಪಿಡಬ್ಲೂ-4**

**ಸಿಡಬ್ಲೂ-5**

| | | |
|---|---|---|
| ಸಾಕ್ಷಿದಾರರ ಹೆಸರು | - | ನಾಗರಾಜು |
| ತಂದೆಯ ಹೆಸರು | - | ಬೈರಶೆಟ್ಟಿ |
| ವಯಸ್ಸು | - | 69 |
| ಕೆಲಸ | - | ಕೂಲಿ |
| ವಾಸ | - | ಕೆ.ಆರ್.ನಗರ ಟೌನ್ |

**ದಿನಾಂಕ 02.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಈ ಹಿಂದೆ ಕೆ,ಆರ್.ನಗರ ಪೋಲಿಸರು ನನ್ನನ್ನು ಯಾವುದೇ ಮಹಜರ್ ಗೆ ಕರೆಸಿಲ್ಲ, ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. 2-3 ವರ್ಷದ ಹಿಂದೆ ನಮ್ಮ ಮನೆಯ ಬಳಿ ಪೋಲಿಸರು ಬಂದಾಗ ನಾನು ರಸ್ತೆಯಲ್ಲಿ ಬರುತ್ತಿದ್ದೆ, ಆಗ ಪೋಲಿಸರು ಬಂದು ಸಹಿ ಹಾಕು ಎಂದು ಹೇಳಿರುವುದಕ್ಕೆ ಸಹಿ ಹಾಕಿರುತ್ತೇನೆ. ಸಾಕ್ಷಿಯು ಸ್ಥಳ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು. ನಿಪಿ 2 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ**

ದಿಃ 08.04.2018 ರಂದು ಕೆ.ಆರ್.ನಗರ ಟೌನ್, ಕುವೆಂಪು ಬಡಾವಣೆಯಲ್ಲಿರುವ ಚಾಸಾ 1 ರವರ ಮನೆಯಲ್ಲಿ ಗಲಾಟೆಯ ಸಂಬಂದ ಪೋಲಿಸರು ಸ್ಥಳ ಮಹಜರ್ ಗಾಗಿ ಬಂದಿದ್ದರು ಎಂದರೆ ಸರಿಯಲ್ಲ. ಆಗ ಪೋಲಿಸರು ನನ್ನನ್ನು ಸ್ಥಳ ಮಹಜರ್ ಸಮಯದಲ್ಲಿ ಪಂಚರಾಗಿ ಹಾಜರಾಗಲು ಕೋರಿರುತ್ತಾರೆ ಅದಕ್ಕೆ ನಾನು ಒಪ್ಪಿರುತ್ತೇನೆ ಎಂದರೆ ಸರಿಯಲ್ಲ. ಆಗ ಚಾಸಾ 1 ರವರು ಸ್ಥಳ ತೋರಿಸಿಕೊಟ್ಟ ಮೇರೆಗೆ ನಿಪಿ 1 ರಂತೆ ಸ್ಥಳ ಮಹಜರ್ ಜರುಗಿಸಿ ನನಗೆ ಓದಿ ತಿಳಿಸಿ ಸ್ಥಳದಲ್ಲಿ ನಿಪಿ 2 ಕ್ಕೆ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ನಿಪಿ 2

ರಲ್ಲಿರುವ ವಿಚಾರಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>**

**<u>ಕೆ.ಆರ್.ನಗರ</u>**

**<u>ಸಿ.ಸಿ. 1575/2019</u>**

**<u>ಪಿಡಬ್ಲೂ-3</u>**

**<u>ಸಿಡಬ್ಲೂ-3</u>**

| | | |
|---|---|---|
| ಸಾಕ್ಷಿದಾರರ ಹೆಸರು | - | ದಿನೇಶ್.ಬಿ.ಎಂ |
| ತಂದೆಯ ಹೆಸರು | - | ಮುತ್ತುಶೆಟ್ಟಿ |
| ವಯಸ್ಸು | - | 36 |
| ಕೆಲಸ | - | ಬಿಸನೆಸ್ |
| ವಾಸ | - | ಕೆ.ಆರ್.ನಗರ |

**<u>ದಿನಾಂಕ 02.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ</u>**

ಚಾಸಾ 1 ನನ್ನ ತಂದೆ, ಚಾಸಾ 2 ನನ್ನ ತಾಯಿ. ಆರೋಪಿತರು ನನ್ನ ಹೆಂಡತಿಯ ತಂದೆ ತಾಯಿಯಾಗಿರುತ್ತಾರೆ. ದಿಃ 19.03.2018 ರಂದು ನನ್ನ ತಂಗಿ ಜಮುನಾಳನ್ನು ಆರೋಪಿತರ ಮಗ ದಿಲೀಪರವರು ಗಾವಡಗೆರೆ ಗ್ರಾಮಕ್ಕೆ ಕರೆದುಕೊಂಡು ಹೋಗಿ ಕೊಲೆ ಮಾಡಿದ್ದರು. ಆ ವಿಚಾರವಾಗಿ ನನ್ನ ತಂದೆ ದಿಲೀಪ ಮತ್ತು 1ನೇ ಆರೋಪಿ ವಿರುದ್ಧ ಮತ್ತು ಇನ್ನಿತರರ ವಿರುದ್ಧ ದೂರು ಸಲ್ಲಿಸಿದ್ದೇವು. ದಿಃ 06.04.2018 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ನಾನು, ಚಾಸಾ 1 ಮತ್ತು 2 ರವರು ನಮ್ಮ ಮನೆಯಲ್ಲಿ ಇದ್ದೇವು. ಆಗ ಆರೋಪಿತರು ತಮ್ಮ ಮನೆಯೊಳಗಡೆ ಬಂದು ನನ್ನ ತಂದೆಯನ್ನು 1 ನೇ ಆರೋಪಿ ಕತ್ತಿನ ಪಟ್ಟಿ ಹಿಡಿದುಕೊಂಡು ಏಳೆದಾಡಿರುತ್ತಾರೆ. ನಮ್ಮ ವಿರುದ್ಧ ಕೊಟ್ಟಿರುವ ದೂರನ್ನು ಹುಣಸೂರು ಗ್ರಾಮಂತರ ಪೋಲಿಸ್ ಠಾಣೆಯಿಂದ ವಾಪಸ್ಸು ಪಡೆದಿರುವಂತೆ ಹೇಳಿರುತ್ತಾರೆ. ನಮ್ಮನ್ನು 1ನೇ ಆರೋಪಿ ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ. ನಂತರ ಅವರು ಹೋಗಿರುತ್ತಾರೆ. ಆನಂತರ ನಾವು ಘಟನೆ ಸಂಬಂದ ಪೋಲಿಸರಿಗೆ ದೂರು ನೀಡಿರುತ್ತೇವೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಘಟನೆಯ ದಿನ ನನ್ನ ತಂದೆಗೆ ಎದೆ ಮತ್ತು ಭುಜಕ್ಕೆ ಕೈಗಳಿಂದ ಹೊಡೆದಿರುತ್ತಾರೆ. (ಆರೋಪಿತರು ಗೈರು ಹಾಜರಿದ್ದು ಅವರನ್ನು ಗುರುತು ಹಚ್ಚುವ ಪ್ರಕ್ರಿಯೆಯಲ್ಲಿ ಆರೋಪಿ ಪರ ವಕೀಲರಲ್ಲಿ ಯಾವುದೇ ತಕರಾರು ಇರುವುದಿಲ್ಲ ಎಂದು ಹೇಳಿರುತ್ತಾರೆ.)

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ**

ಘಟನೆಯ ದಿನದಂದು ಆರೋಪಿತರು ಚಾಸಾ 1 ಮತ್ತು 2 ರವರಿಗೆ ಕೊಲೆ ಬೆದರಿಕೆ ಹಾಕಿದರು ಎಂದರೆ ನನಗೆ ಕೊಲೆ ಬೆದರಿಕೆ ಹಾಕಿದರು ಎಂದು ಸಾಕ್ಷಿ ನುಡಿಯುತ್ತಾರೆ. ಘಟನೆಯ ದಿನದಂದು ಚಾಸಾ 1 ಮತ್ತು 2 ಮತ್ತು ನನಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಎಲ್ಲರಿಗೂ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ.

**ಪಾಟೀ ಸವಾಲು ಶ್ರೀ ಎಸ್.ಎಸ್.ಆರ್ ಪರ ವಕೀಲರಿಂದಃ**

ಆರೋಪಿತರ ಮಗಳು ನನ್ನ ಹೆಂಡತಿ ಎಂದರೆ ಸರಿ. ನನ್ನ ತಂಗಿ ಕಾಳಮಾತ್ರೆ ಸೇವಿಸಿ ಸ್ವತಃ ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಇದಕ್ಕೆ ಸಂಬಂದಪಟ್ಟ ಹಾಗೆ ಹುಣಸೂರು ಪೋಲಿಸ್ ಠಾಣೆಯಲ್ಲಿ ಆರೋಪಿತರ ವಿರುದ್ಧ ಯಾವುದೇ ದೂರು ದಾಖಲಿಸಿಲ್ಲ ಎಂದರೆ ಸರಿಯಲ್ಲ. ದಿಃ 06.04.2018 ರಂದು ಆರೋಪಿತರು ತೊಂಡಾಳು ಗ್ರಾಮದಲ್ಲಿ ಇದ್ದರು ಕೆ.ಆರ್.ನಗರಕ್ಕೆ ಬಂದಿಲ್ಲ, ಚಾಸಾ 1 ರವರಿಗೆ ಯಾವುದೇ ಹಲ್ಲೆ ನಡೆಸಿಲ್ಲ ಎಂದರೆ ಸರಿಯಲ್ಲ.

2. ನನ್ನ ತಂಗಿ ಮೃತಪಟ್ಟ ನಂತರ ಆರೋಪಿತರು ನಮ್ಮ ಮನೆಗೆ ಬರುತ್ತಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂಗಿ ಕೊಲೆಯಾದ ದಿನದಿಂದ ಆ ಜಗಳಕ್ಕೆ ಸಂಬಂದಪಟ್ಟ ಹಾಗೆ ಆರೋಪಿತರು ನಮ್ಮ ಮನೆಗೆ ಬರುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಈಗ ಮೈಸೂರಿನ ಒಂದು ಪವರ್ ಟಿಲ್ಲರ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ದಿಃ 06.04.2018 ರಂದು ನಾನು ಕೆಲಸದಲ್ಲಿ ಇದ್ದೆ ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಕೆಲಸ ಮುಗಿಸಿ ಬಂದಿದ್ದೆ ಎಂದು ನುಡಿಯುತ್ತಾರೆ.

3. ನಾನು ದೂರು ನೀಡಿಲ್ಲ, ಚಾಸಾ 1 ದೂರು ನೀಡಿದ್ದಾರೆ. ಆದರೆ ನಾನು ಜೊತೆಯಲ್ಲಿದ್ದೆ. ನಿಪಿ 1 ಕ್ಕೆ ನನ್ನ ಸಹಿ ಇಲ್ಲ ಎಂದರೆ ಸರಿ. ಆರೋಪಿತರು ಯಾವುದೇ ಅತಿಕ್ರಮ ಪ್ರವೇಶ ಮಾಡಿಲ್ಲ, ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಹಲ್ಲೆ ಹಿನ್ನೆಲೆಯಲ್ಲಿ ಚಾಸಾ 1 ಖಾಸಗಿ ಆಸ್ಪತ್ರೆಯಲ್ಲಿ ಇಂಜೆಕ್ಷನ್ ಪಡೆದಿದ್ದಾರೆ. ಚಿಕಿತ್ಸೆ ಪಡೆದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿಲ್ಲ.

4. ಗಲಾಟೆ ಆಗದೆ ಇರುವ ಕಾರಣ ಗಲಾಟೆಯಾಗಿದೆ ಎಂದು ಹೇಳಲಾದ ದಿನದಂದು ದೂರು ನೀಡಿಲ್ಲ ಎಂದರೆ ಗಲಾಟೆಯಾದ 2 ದಿನದ ನಂತರ ದೂರು ನೀಡಿದ್ದೇವೆ ಎಂದು ಸಾಕ್ಷಿ ನುಡಿಯುತ್ತಾರೆ. ಈ ಸಂಬಂದ ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ